ಹೀಗಿತ್ತು:

ಟಿಪ್ಪು ಮತ್ತು ಹೈದರ್‌ಗೂ ಮೊದಲು, ಮೈಸೂರಿನಿಂದ ಒಬ್ಬ ನಾಯಕ ರಾಜ ಈ ಹಾದಿಯಲ್ಲಿ ಪ್ರಯಾಣಿಸುತ್ತಿದ್ದನಂತೆ. ಈ ಊರಿಗೆ ಬಂದಾಗ ಸುಂದರಿಯಾದ ಯುವತಿಯೊಬ್ಬಳನ್ನು ಕಂಡು ಅನುರಕ್ತನಾಗುತ್ತಾನೆ. ಅವನು ಮರಳಿ ಹೋಗದೆ, ಪ್ರಯಾಣ ಮುಂದುವರಿಸದೆ ಇಲ್ಲೇ ಉಳಿದು ಸಂಬಂಧ ಬೆಳೆಸುತ್ತಾನೆ. ಅನಂತರ ಮೈಸೂರಿನಿಂದ ಬೇಕಷ್ಟು ಧನಕನಕಗಳನ್ನು ತರಿಸಿಕೊಂಡು ದೊಡ್ಡದಾದೊಂದು ದೇವಸ್ಥಾನವನ್ನು ಕಟ್ಟಿಸುತ್ತಾನೆ. ಅದರ ಸುತ್ತಲು ಕೆಂಗಲ್ಲಿನ ಕೋಟೆಯನ್ನು ಕಟ್ಟಿಸುತ್ತಾನೆ. ಅದಕ್ಕೆ ಈ ಊರಿಗೆ ‘ಕೋಟೆ ವಾದಿಲ್ಕಲ್’ (ಕೋಟೆ ಬಾಗಿಲ ಬಳಿ) ಎಂಬ ಹೆಸರಾಗುತ್ತದೆ.

ಯಾವನೋ ಒಬ್ಬ (ವಣ್ಣಾನ್, ಮಟಯನ್ ತೆಯ್ಯಂ (ಭಕ್ತಿ ಪ್ರಧಾನವಾದ ಕಲಾಪ್ರಕಾರ) ಕಟ್ಟಿಯಾಡನ ಸಮುದಾಯದವರು) (ಪುಳ್ಳುವನ್ ನಾಗದೇವತೆಗಳ ಪ್ರೀತಿಗೋಸ್ಕರ ವಿಶೇಷ ವೀಣೆಯನ್ನು ಬಳಸಿ ಹಾಡುವ ಸಮುದಾಯದವರು) ವಣ್ಣಾನೋ, ಮಲಯನೋ, ಪುಳ್ಳುವನೋ ನಾಯ್ಕನ್ ಪಾಟ್ಟ್ ಎಂಬ ಒಂದು ವಡಕ್ಕನ್‌ಪಾಟ್ಟ್ (ಉತ್ತರದ ಜಾನಪದ ಹಾಡು) ಅನ್ನು ರಚಿಸುತ್ತಾನೆ. ವಣ್ಣಾನ್, ಚಂದುಕುಟ್ಟಿ ಎಂಬುವವನು ಕಳ್ಳಬಟ್ಟಿ ಕುಡಿದು ಅಮಲೇರಿ ಮಧ್ಯೆರಾತ್ರೆಗಳಲ್ಲಿ ಉರಿಯಲು ಶಂಕಿಸುವ ಸೂಟೆಯನ್ನು, ಕಂಪಿಸುವ ಕೈಯಿಂದ ಹಿಡಿದು ಬೀಸಿ ಬೀಸಿ ನಡೆಯುವಾಗ ನಾಯ್ಕನ್ ಗೀತೆಯನ್ನು ಗಟ್ಟಿಯಾಗಿ ಹಾಡುತ್ತಿದ್ದನಂತೆ. ಹಾಗೆ ನಾಯ್ಕನ್ ಹಾಡಿಗೆ ಚಂದುಟ್ಟಿ ಪಾಟ್ಟೆ ಎಂಬ ಹೊಸದೊಂದು ಹೆಸರು ಬಂತು.

ಪುರಾತನ ಕತೆಯನ್ನು, ಜಾನಪದ ಗೀತೆಗಳನ್ನು ಹಾಗೂ ಚರಿತ್ರೆಗಳನ್ನೆಲ್ಲಾ ಸಂಪನ್ನವಾಗಿಸಿದ ಊರು ನನ್ನದು ಎಂದು ಸಂಕ್ಷಿಪ್ತವಾಗಿ ಹೇಳಬಹುದು.

ತೆಯ್ಯಂ ನಮ್ಮ ಊರಿನ ಪ್ರಮುಖ ಕಲಾಪ್ರಕಾರ. ಕುಟ್ಟಿಚಾತ್ತನ್, ಗುಳಿಗ, ಕಂಡಾಕರ್ಣನ್, ವಸೂರಿ ಮಾಲ ಎಂಬ ತೆಯ್ಯಂಗಳನ್ನು ಕಟ್ಟಿಯಾಡುವ ಮೂರು ನಾಲ್ಕು ಬನಗಳು ನನ್ನ ಊರಿನಲ್ಲಿದ್ದವು. ಅದರಲ್ಲಿ ಒಂದು ಬನ ನಿಷ್ಕ್ರಿಯವಾಯಿತು. ಅದು ಕನ್ನಾಟಮ್ಮನ ಬನವಾಗಿತ್ತು. ಅಲ್ಲಿ ತೆಯ್ಯಂ ಕಟ್ಟಿಯಾಡಿಸುವ ಮೊದಲು ಬಲಿಕೊಡಬೇಕು. ಬಲಿ ಮನುಷ್ಯನನ್ನೇ ಅರ್ಪಿಸಬೇಕು. ಅವನು ಕಟ್ಟುಮಸ್ತಾದ ಆಳಾಗಿರಬೇಕು. ಮನುಷ್ಯ ಬಲಿ ಸಿಗಲಿಲ್ಲವಾದರೆ ಆನೆಯನ್ನಾದರೂ ಕೊಡಬೇಕು. ಬಲಿ ಸಿಗದ ಕಾರಣ ಬನ ನಿಷ್ಕ್ರಿಯವಾಗಿ ಕಾಡು ಬೆಳೆಯಿತು. ಬನದ ನಡುವೆ ಬೆಳೆದು ನಿಂತಿದ್ದ ಅರಳೀಮರದ ರೆಂಬೆಗಳೆಲ್ಲಾ ಮುರಿದು ಬಿದ್ದು ಮರ ದ್ರವಿಸಿ ಇಲ್ಲವಾಗತೊಡಗಿದೆ. ಬನದ ಬಳಿಯಲ್ಲಿಯೇ ಒಂದು ಕೊಳವಿದೆ. ಈ ಕೊಳದಲ್ಲಿ ಕನ್ನಾಟಮ್ಮನ ವಾಸವಂತೆ. ಕನ್ನಾಟಮ್ಮ ಭಗವತೀ ಸ್ವರೂಪಿ. ಪ್ರತೀಕಾರದ ರುದ್ರದೇವತೆ. ಹೆಣ್ಣಿನ ಮಾನವನ್ನು ಕಾಪಾಡಲು ಅವತಾರವೆತ್ತಿ ದುಷ್ಟರನ್ನು ಸರ್ವನಾಶ ಮಾಡುವ ದೇವತೆ. ಅನಂತರ ಎಂದೋ ಒಂದು ದಿನ ಬನದ ಪೀಠಗಳೆಲ್ಲಾ ನಶಿಸಲ್ಪಟ್ಟವಂತೆ. ಆಗ ಕನ್ನಾಟಮ್ಮ ಕೊಳದಲ್ಲಿ ಆಶ್ರಯ ಪಡೆದಳಂತೆ. ಕೊಳದ ತಳದಲ್ಲಿ ಒಂದು ತಾಮ್ರದ ಹಂಡೆಯಿದೆಯಂತೆ. ಅದರ ತುಂಬಾ ಬೆಳ್ಳಿ ಬಂಗಾರಗಳಿವೆಯಂತೆ. ಅದಕ್ಕೆ ತಾಮ್ರದ ದೊಡ್ಡ ಮುಚ್ಚಳವಿದೆಯಂತೆ. ಅದರ ಮೇಲೆ ಕನ್ನಾಟಮ್ಮ ಕುಳಿತುಕೊಂಡಿರುತ್ತಾಳಂತೆ. ಕೊಳದ ನೀರು ಸಂಪೂರ್ಣವಾಗಿ ಬತ್ತಿಸಿದರೂ ಕನ್ನಾಟಮ್ಮನ ದರ್ಶನ ಲಭ್ಯವಾಗದು. ನೀರು ಬತ್ತುತ್ತಿದ್ದಂತೆ ದೇವತೆ ಮತ್ತು ಹಂಡೆ ಮಣ್ಣಿನ ತಳಕ್ಕೆ ಸರಿದುಹೋಗುತ್ತವೆ. ಮಣ್ಣನ್ನು ಅಗೆದು ತೆಗೆದರೂ ಹಂಡೆ ಮತ್ತೆ ಕೆಳಕ್ಕೆ ಸರಿಯುತ್ತದಂತೆ.

ಕೋಟೆಬಾಗಿಲಿನಿಂದ ನೋಡಿದರೆ ದೂರದಲ್ಲಿರುವ ಕಾಂಜಿರತ್ತು ಬನ ಕಾಣಿಸುತ್ತದೆ. ಅದು ಹೆಸರಿಗಷ್ಟೇ ಬನ. ಅಸಲಿಗೆ ಅಲ್ಲಿ ಬನವಾಗಲಿ, ಕೊಳವಾಗಲಿ ಇಲ್ಲ. ಬಯಲಿನ ಬದಿಯಲ್ಲಿ ಒಂದು ಕಾಸರಗ ಮರವಿದೆ. ಅದರ ಕೆಳಗೆ ಎಣ್ಣೆ ಹರಿದು ಕಪ್ಪಾದ ನಯವಾದ ಒಂದು ಸೈಜ್‌ಗಲ್ಲಿದೆ! ನಮ್ಮ ಊರಿನ ಪ್ರಮುಖ ದೇಗುಲವದು.

ಕಾಂಜಿರತ್ತು ಬನದ ತೆಯ್ಯಂನ ಹೆಸರು ನೀಲಿ. ತೆಂಗಿನ ಮರದಿಂದ ಸಿಗುವ ಎಳೆಗರಿಯನ್ನು ಉಡುಪನ್ನಾಗಿ ಧರಿಸಿ, ಉದ್ದನೆಯ ಕೃತಕ ತಲೆಗೂದಲನ್ನು ಬಿಟ್ಟು ನೀಲಿಕರಿಂಗಾಳಿ ಬದು ಒಡೆದ ಎಂಟು ಗದ್ದೆಯ ನಡುವೆ ಅತ್ತಿಂದಿತ್ತ ಓಡಾಡುತ್ತಿರುತ್ತದೆ. ನೀಲಿ ತೆಯ್ಯಂನ ಕಿವಿಯ ಬಳಿ ಕೇಕೆ ಹಾಕುತ್ತಾ ಒಂದಷ್ಟು ಪಡ್ಡೆ ಹುಡುಗರು ಜೊತೆಗೆ ಓಡುತ್ತಾರೆ. ಅವರ ಪೈಕಿ ಇಬ್ಬರ ಕಿವಿಯನ್ನು ಹಿಡಿದು ತೆಯ್ಯಂ ಅವರನ್ನೂ ಜೊತೆಗೆ ಸೇರಿಸಿ ಒಂದಿಷ್ಟು ದೂರ ಓಡುತ್ತದೆ.

ಹಳ್ಳಿಯಲ್ಲಿ ಕಳೆದ ನನ್ನ ಬಾಲ್ಯ ಜಾನಪದ ಗೀತೆಗಳ ಮಾಧುರ್ಯದಿಂದ ತುಂಬಿತ್ತು. ಅದು ಮಾವಿನ ಹಣ್ಣಿನ ರಸದಂತೆ ಸಿಹಿಯಾಗಿರುತ್ತದೆ. ತೊಂಡಿ ಹಣ್ಣಿನಂತೆ ಕೆಂಪಗೆ ಊದಿಕೊಂಡಿರುತ್ತಿತ್ತು. ಕಂಗಿನ ಹಾಳೆಯಂತೆ ನಯವಾಗಿರುತ್ತಿತ್ತು. ವನಸುಮದ ಸುವಾಸನೆಯಿರುತ್ತಿತ್ತು. ಅತಿರಾಣಿ ಹೂವಿನ ಬಣ್ಣವಿರುತ್ತಿತ್ತು.

ಶಾಲೆ ಮುಚ್ಚಿದ ಮರುದಿನವೇ ಊರ ಮಾವಿನ ಮರದ ಕೆಳಗೆ ತೆಂಗಿನ ಗರಿಯ ಚಪ್ಪರವೇಳುತ್ತದೆ. ಚಪ್ಪರದ ಕೆಳಗೆ ಅನ್ನ–ಸಾರು ಮಾಡಿ ಆಟವಾಡುತ್ತೇವೆ. ಬೇಡದಿರುವ ಗರಿಗಳನ್ನು ಬಯಲಿನಲ್ಲಿ ಒಟ್ಟು ಮಾಡಿ ಉರಿಸುತ್ತೇವೆ. ತಾಳೆ ಮರದ ಗರಿಯಿಂದಲೂ ಚಪ್ಪರ ಸಜ್ಜುಗೊಳಿಸುತ್ತಾರೆ. ಅದರ ನಂತರ ಒಲೆ ಮಾಡಿ ತೆಂಗಿನ ಚಿಪ್ಪಿನಲ್ಲಿ ಅನ್ನ–ಸಾರು ತಯಾರಿಸಲಾಗುತ್ತದೆ.

ಇದ್ದಕ್ಕಿದ್ದಂತೆ ಒಂದು ದಿನ ಮಾವಿನಕಾಯಿ ಹಣ್ಣಾಗಿ ಕೆಳಗೆಬೀಳುತ್ತದೆ. ಅನಂತರ ಎಡೆಬಿಡದೆ ಮಾವಿನಕಾಯಿ ಉದುರುತ್ತಿರುತ್ತದೆ. ಮಾವಿನ ಹಣ್ಣು ರಸತುಂಬಿ ಬೊಬ್ಬೆ ಬಂದ ಕೆನ್ನೆಯಂತೆ ಉಬ್ಬಿರುತ್ತದೆ.

ಎರಡು ಬೆಳೆ ತೆಗೆಯುವ ಗದ್ದೆಯಲ್ಲಿ ಮೂರನೆಯ ಬೆಳೆಯಾಗಿ ಸೌತೆ ಬೆಳೆಸುತ್ತಾರೆ. ಉತ್ತು ಮಗುಚಿ ಹಾಕಿದ ಗದ್ದೆಯಲ್ಲಿ ಗುಳಿ ತೋಡುತ್ತಾರೆ. ಮಣ್ಣಿನ ಹೆಂಟೆಗಳನ್ನು ಒಡೆದು ಪುಡಿಮಾಡಿ ಗುಳಿಯನ್ನು ಸಪಾಟು ಮಾಡುತ್ತಾರೆ. ಗುಳಿಯಲ್ಲಿ ಮೊಳೆ ಬಂದ ಸೌತೆಯನ್ನು ನೆಡುತ್ತಾರೆ. ಬೆಳಿಗ್ಗೆ ಮತ್ತು ಸಂಜೆ ಮಣ್ಣಿನ ಪಾತ್ರೆಯಲ್ಲಿ ನೀರನ್ನು ಗೋರಿ ತಂದು ಅದರ ಮೇಲೆ ಸಿಂಪಡಿಸಲಾಗುತ್ತದೆ. ವಿಷು ಹಬ್ಬಕ್ಕೆ ಮೊದಲೇ ಸೌತೆ ಬಲಿಯುತ್ತದೆ. ಹಣ್ಣಾದ ಸೌತೆಯನ್ನು ಕುಯ್ದು ಮಂಕರಿಯಲ್ಲಿ ತುಂಬಿ ಮನೆಗೆ ಒಯ್ಯಲಾಗುತ್ತದೆ. ಬಲಿತದ್ದೆಲ್ಲವನ್ನು ತೆಂಗಿನ ಗರಿಯಲ್ಲಿ ಸುತ್ತಿ ಪೊಟ್ಟಣ ಮಾಡಿ ಮೊಗಸಾಲೆಯಲ್ಲಿ ತೊಲೆಗೆ ನೇತು ಹಾಕುತ್ತಾರೆ. ಕರ್ಕಾಟಕ ತಿಂಗಳಿನಲ್ಲಿ ಹಲಸಿನ ಬೀಜ ಸೇರಿಸಿ ಸೌತೆ ಸಾರು ಮಾಡಲಾಗುತ್ತದೆ. ಒಂದಷ್ಟು ಹೆಣ್ಣುಮಕ್ಕಳ ತಂದೆಯಾದ ಚಂದುಟ್ಟಿಯವರು ಹೇಳುತ್ತಾರೆ. ‘ಸೌತೆ ಕುಯ್ದರೆ ಸಾಂಬಾರು ಏನೆಂದು, ನನ್ನ ಹೆಂಡತಿ ಹಡೆದರೆ ಮಗುವೇನೆಂದು ಕೇಳುವುದು ಬೇಡವೆಂದು’.

ಸೌತೆ ಕುಯ್ದು ನಂತರ ಗದ್ದೆಯಲ್ಲಿ ಸೌತೆ ನಾಟಕವಾಡುತ್ತಾರೆ. ಪಯ್ಯಕುರಿಕ್ಕಳ್ ನಾಟಕದ ಗುರುಗಳು. ಗುರುಗಳ ಪೆಟಾರಿ ತುಂಬಾ ರಾಜ ರಾಣಿ, ರಾಜಕುಮಾರ, ರಾಜಕುಮಾರಿಯರ ರೇಷ್ಮೆಯಂತೆ, ಫಳಫಳಿಸುವ ಪೋಷಾಕುಗಳಿರುತ್ತವೆ. ಜಿರಲೆ ಮಿಠಾಯಿಯ ವಾಸನೆಯಿರುವ ಉಡುಪುಗಳನ್ನು ವರ್ಷಕ್ಕೊಮ್ಮೆ ಗಾಳಿಗೆ ಹಾಕಿ ಒಣಗಿಸಲೇಬೇಕು.

ರಾತ್ರಿಗಳಲ್ಲಿ ತೆಂಕಣ ಮನೆಯೊಳಗಿನಿಂದ ಮಾಣಿಕ್ಯಜ್ಜಿಯ ಗೂರಲು ಧ್ವನಿ ಕೇಳಿಸುತ್ತದೆ. ಮೂಡಲ ಮನೆಯ ಬಾಗಿಲಿನ ಅಗುಳಿ ಅಳುವುದನ್ನು, ಟಪ್ ಎಂದು ಮುಚ್ಚುವ ಸದ್ದನ್ನು ಕೇಳಬಹುದು. ನಿದ್ರೆಯೇ ಹತ್ತದ ದಾರಪ್ಪಣ್ಣ ಮಾತ್ರ ಎಲ್ಲರೂ ನಿದ್ರೆ ಹೋಗಲು ಕೊಳಲನ್ನು ನುಡಿಸುತ್ತಾ ನಸುಕು ಹರಿಸುತ್ತಾರೆ. ನನ್ನ ಬಾಲ್ಯ ಕಾಲಕ್ಕೆ ಕೊಳಲಿನ ನಾದದ ಇಂಪಿದೆ.

ಇಂತಹ ಸುಂದರವಾದ ಊರನ್ನು ಯಾರಾದರೂ ಉಪೇಕ್ಷಿಸುತ್ತಾರೆಯೇ? ಆದರೂ ಊರು ಬಿಡಲೇಬೇಕಾಯಿತು. ಅಂತಹದೊಂದು ಪರಿಸ್ಥಿತಿ ನನಗೆ ಬಂದೊದಗಿತು.

ನನ್ನಪ್ಪ ಗರಗಸದ ಕೆಲಸಗಾರ. ಅಂದರೆ ಮರದ ದಿಮ್ಮಿಗಳನ್ನು ಗರಗಸದಿಂದ ಸೀಳುವ ಕೆಲಸಗಾರ. ಮೊಸಳೆಯ ಹಲ್ಲಿನಂತಿರುವ ಗರಗಸದ ಬಾಯಿಯನ್ನು ಅರದಿಂದ ಹರಿತಗೊಳಿಸುವ ಸದ್ದೇ ನನ್ನ ಬಾಲ್ಯದ ತಾಳವಾದ್ಯ.

ಸಾಮಾನ್ಯವಾಗಿ ಗರಗಸದ ಕೆಲಸದವರು ಕೆಲಸದ ಜಾಗಕ್ಕೆ ಬಂದಮೇಲೆ ಗರಗಸದ ಹಲ್ಲುಗಳನ್ನು ಹರಿತಗೊಳಿಸುವುದು ವಾಡಿಕೆ. ಅದನ್ನು ಕೇಳಿಸಿಕೊಂಡರೆ ಮನೆ ಮಾಲಿಕನಿಗೆ ಕೋಪಬರುತ್ತದೆ. ಮಧ್ಯಾಹ್ನದವರೆಗೆ ಹರಿತಗೊಳಿಸುತ್ತಿರುತ್ತಾರೆ. ಪ್ರತಿ ನಿಮಿಷವು ಮನೆಯವನು ಬೈಯುತ್ತಲಿರುತ್ತಾನೆ. ಇದನ್ನು ಕೇಳದಿರಲು ಅಪ್ಪ ಮುಂಜಾನೆಯೇ ಎದ್ದು ಹರಿತಗೊಳಿಸಲು ಪ್ರಾಂಭಿಸುತ್ತಾರೆ. ಮೊದಮೊದಲು ನನಗದು ಅರೋಚಕವಾಗಿರುತ್ತಿತ್ತು. ಮತ್ತೆ ಯಾವಾಗಲೋ ಅದರೊಂದಿಗೆ ಹೊಂದಾಣಿಕೆ ಮಾಡಿಕೊಂಡೆ.

ಅಪ್ಪ, ಅಮ್ಮ ಮತ್ತು ಒಬ್ಬಳು ತಂಗಿಯಷ್ಟೇ